

# ಅದ್ಭುತ ಆರ್ಕಿಡ್ ಪ್ರಪಂಚ

ಕ್ರಿಸ್ತಪೂರ್ವದಿಂದಲೂ ಕಾಮೋತ್ತೇಜಕವಾಗಿ ಬಳಕೆಯಾಗುತ್ತಿದ್ದ ಆರ್ಕಿಡ್ ಸಸ್ಯದ ಗಡ್ಡೆ ಬೇರುಗಳು ಮತ್ತು ಹೂವುಗಳ ಬಗ್ಗೆ ವಿಜ್ಞಾನಿಗಳಿಗೂ, ಜನಸಾಮಾನ್ಯರಿಗೂ ಎಂದೂ ತಣಿಯದ ಕುತೂಹಲವಿದೆ.

■ ಚಿತ್ರ–ಲೇಖನ:
**ಪುಟ್ಟರಾಜು ಕೆ.**

**ಭಾ**ರತದಲ್ಲಿ 45 ಸಾವಿರ ಸಸ್ಯಸಂಕುಲ ಕಾಣಬಹುದು. ಪ್ರಪಂಚದಲ್ಲಿ ಹೂ ಬಿಡುವ ಜಾತಿ ಸಸ್ಯಗಳ ಪೈಕಿ 435 ಕುಟುಂಬದ ಶೇಕಡಾ 75 ಭಾಗ ಭಾರತದಲ್ಲಿದೆ. ಆರ್ಕಿಡ್ ಎಂಬುದು 'ಆರ್ಚೀಸ್' ಎನ್ನುವ ಗ್ರೀಕ್ ಪದದಿಂದ ಉತ್ಪತ್ತಿಯಾದ ಪದ. ಇದರರ್ಥ ವೃಷಣ ಎಂದು! ಸಾಮಾನ್ಯವಾಗಿ ನೆಲವಾಸಿ ಆರ್ಕಿಡ್‌ಗಳಲ್ಲಿ ವೃಷಣವನ್ನು ಹೋಲುವ ಗಡ್ಡೆ ಬೇರುಗಳಿರುವುದರಿಂದ ಅದಕ್ಕೆ ಆರ್ಚೀಸ್ ಎಂಬ ಹೆಸರು ಬಂದಿದೆ.

ಈ ಜಾತಿಯ ಸಸ್ಯ ಸಂಕುಲವನ್ನು 'ಆರ್ಕೀಡೇಸಿ' ಎಂದು ಕರೆಯಲಾಗುತ್ತದೆ. ಇವನ್ನು ಕನ್ನಡದಲ್ಲಿ ಸೀತಾಳೆ, ಸೀತೆಮುಡಿ ಎಂದು ಕರೆಯುತ್ತಾರೆ.

ಕ್ರಿಸ್ತ ಪೂರ್ವದಿಂದ ಕಾಮೊತ್ತೇಜಕ ಔಷಧಿಯಾಗಿ ಆರ್ಕೀಡಸ್ ಸಸ್ಯದ ಗೆಡ್ಡೆ ಬೇರುಗಳನ್ನು ಉಪಯೋಗಿಸಲಾಗುತ್ತಿತ್ತು. ಆರ್ಕಿಡ್ ತನ್ನ ವಿಶಿಷ್ಟ ಗುಣಗಳಿಂದ ಸಾಮಾನ್ಯರನ್ನಷ್ಟೇ ಅಲ್ಲದೆ, ವಿಜ್ಞಾನಿಗಳನ್ನೂ ತನ್ನತ್ತ ಆಕರ್ಷಿಸುತ್ತದೆ. ಆರ್ಕಿಡ್ ಹೂವು ಅಂಕುರವಾದಾಗಿನಿಂದಲೂ ಗಮನಿಸಬೇಕು. ಪ್ರತಿವರ್ಷ ವರ್ಷಋತು ಬಂತೆಂದರೆ ಪಶ್ಚಿಮಘಟ್ಟದಲ್ಲಿ ಆರ್ಕಿಡ್ ಹೂವುಗಳ ರಾರಾಜಿಸುತ್ತವೆ. ಈ ಆರ್ಕಿಡ್‌ಗಳನ್ನು ಕಟೋನಿಯಾ ಪೆಡುಂಕ ಲಾರಿಸ್ ಆರ್ಕಿಡ್ ಎಂತಲೂ ಕರೆಯಲಾಗುತ್ತದೆ.

ಆರ್ಕಿಡ್ ಸಸ್ಯಗಳು ವಂಶಾಭಿವೃದ್ಧಿಯ ಮೋಹದ ಜಾಲ ನಿಜಕ್ಕೂ ಕುತೂಹಲಕಾರಿ. ಕಠೋನಿಯಾ ಎಂಬ ಆರ್ಕಿಡ್ ಹೂವು ಪಶ್ಚಿಮ ಘಟ್ಟದಲ್ಲಿ ಅರಳುತ್ತದೆ. ಹೂವಿನಲ್ಲಿರುವ ತುಟಿ ದಳ, ದುಂಬಿಯನ್ನು ಹೋಲುತ್ತದೆ. ಈ





